ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧ ೩೦೬.

೨ ೫೭.

೩ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಹಂತ ಹಂತವಾಗಿ ವಸತಿ ಗೃಹಗಳನ್ನು ಒದಗಿಸಲಾಗುವುದು.

ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ. ಹಾಗೂ ಈ ವರ್ಷ ೩೦೦ ಜನ ಡಾಕ್ಟರುಗಳಿಗೆ, ೨೨೦೦ ಜನ ಕಾಂಪೌಂಡರ್‌ಗಳಿಗೆ ೨೦೦ ಜನ ನರ್ಸ್‌ಗಳಿಗೆ ವಸತಿ ಸೌಕರ್ಯ ಒದಗಿಸುವ ಬಗ್ಗೆ ಪ್ರಯತ್ನಗಳಾಗಿವೆ. ಹಾಗೂ ಈ ಜಿಲ್ಲೆಯಲ್ಲಿ ಈಗಾಗಲೇ ೫೭ ಜನರಿಗೆ ವಸತಿ ಸೌಕರ್ಯ ಒದಗಿಸಲಾಗಿದೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಬಿಜಾಪುರದ ಜಿಲ್ಲಾ ಆಸ್ಪತ್ರೆಯ ೩೦೬ ಸಿಬ್ಬಂದಿ ಪೈಕಿ ೫೭ ಜನರಿಗೆ ವಸತಿ ಸೌಕರ್ಯವನ್ನು ಒದಗಿಸಲಾಗಿದೆಯೆಂದು ಹೇಳಿದ್ದೀರಿ. ಹಾಗೂ ಇನ್ನೂ ಉಳಿದವರಿಗೆ ವಸತಿ ಸೌಕರ್ಯ ಒದಗಿಸುವುದು ಅವಶ್ಯಕ ಇದೆ. ಹೊಸ ಕ್ಲಿನಿಕಲ್ ಆಸ್ಪತ್ರೆ ನಗರದಿಂದ ೩ ಕಿ. ಮೀಟರ್ ದೂರ ಇರುವುದರಿಂದ ಹಾಗೂ ನಾಗರೀಕರಿಗೆ ಹೆಚ್ಚು ಸೇವೆ ಒದಗಿಸುವ ದೃಷ್ಟಿಯಿಂದ ಹಾಗೂ ಸಿಬ್ಬಂದಿಗೆ ಉಪಯೋಗ ಆಗುವ ದೃಷ್ಟಿಯಿಂದ ಅಲ್ಲಿನ ಅವಶ್ಯಕ ಸೇವಾ ಸಿಬ್ಬಂದಿಯವರ ಕನಿಷ್ಟ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಪರಿಶೀಲನೆ ಮಾಡುತ್ತೇನೆ ಸ್ವಾಮಿ.

ಸಂತಾನಹರಣ ಚಿಕಿತ್ಸೆಯಿಂದಾದ ಮರಣ

೨೫. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೪–೮೫ರಲ್ಲಿ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಲ್ಲಿ ನಂತರ ಉಂಟಾದ ತೊಂದರೆಗಳಿಂದ ರಾಜ್ಯದಲ್ಲಿ ಎಷ್ಟು ಜನ ಸತ್ತಿದ್ದಾರೆ.

ಆ) ನೆರೆಹೊರೆಯ ರಾಜ್ಯಗಳಿಗೆ ಇದನ್ನು ಹೋಲಿಸಿದಾಗ ಸತ್ತವರ ಸಂಖ್ಯೆಯಂ ಕಡಿಮೆಯೋ ಅಥವಾ ಅಧಿಕವೋ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸುವುದು.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ೨೬.

ಆ) ಬೇರೆ ರಾಜ್ಯಗಳಿಂದ ಈ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಏನು ೨೬ಜನ ಎಂದು ಉತ್ತರ ಕೊಟ್ಟಿದ್ದಾರೆ ಇದು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚು ಆಗುತ್ತದೋ ಅಥವಾ ಕಡಿಮೆ ಆಗುತ್ತದೋ?

ಶ್ರೀ ಎಚ್.ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಬೇರೆ ರಾಜ್ಯದ ಅಂಕಿ ಅಂಶ ನನ್ನ ಹತ್ತಿರ ಇಲ್ಲ ನವಂಗೆ ತಿಳಿದ ಪ್ರಕಾರ ಇದು ೦.೨೧ ಪರ್ಸೆಂಟ್ ಆಗುತ್ತದೆ. ಇದೂ ಕೂಡಾ ಆಗಬೇ ಇರುವ ರೀತಿಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಬೇರೆ ರಾಜ್ಯದ ಮಾಹಿತಿ ನಮ್ಮ ಹತ್ತಿರ ಇಲ್ಲ.

ಶ್ರೀ ಜಿ. ರಾಜೂಗೌಡ —ಹಿಂದೆ ಟ್ಯುಬೆಕ್ಟಮಿ ಏನು ಮಾಡುತ್ತಿದ್ದರು. ಆದರಿಂದ ಮರಣ ಜಾಸ್ತಿಯಾಯಿತೇ ಅಥವಾ ಈಗ ಏನು ಉದರ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದಾರೆ ಇದರಲ್ಲಿ ಮರಣ ಜಾಸ್ತಿಯಾಗುತ್ತಿದೆಯೇ?

ಶ್ರೀ ಎಚ್.ಎಲ್. ತಿಮ್ಮೇಗೌಡ.—ಆಪರೇಷನ್ ಮಾಡತಕ್ಕ ಕಾಲದಲ್ಲಿ ಅಕಸ್ಮಾತ್ತಾಗಿ ಹೀಗೆ ಮೊದಲಿನಿಂದಲೂ ಆಗುತ್ತಿವೆ. ಕೆಲವರಿಗೆ ಅನೆಸ್ತೀಶಿಯಾ ಕೊಟ್ಟಾಗ ರಿಯಾಕ್ಷನ್ ಇದ್ದರೆ ಸತ್ತುಹೋಗುತ್ತಾರೆ. ಈ ರೀತಿ ಆಗದ ರೀತಿ ನೋಡಿಕೊಳ್ಳುವ ಬಗ್ಗೆ ಜಿಲ್ಲಾಧಿಕಾರಿಗಳು ವೈದ್ಯಾಧಿಕಾರಿಗಳವರಿಗೆ ತಿಳಿಸಿದ್ದಾರೆ. ಮುಂದೆ ಇಷ್ಟು ಸಂಖ್ಯೆಯಲ್ಲಿ ಆಗುವುದಕ್ಕೆ ನಾವು ಬಿಡುವುದಿಲ್ಲ.

ಚುಕ್ಕೆ ಪ್ರಶ್ನೆ. ೧೯೬–ಸದಸ್ಯರು ಗೈರುಹಾಜರಿ